# ಕನ್ನಡ ನಾಟಕಕ್ಕೆ ಮಹಿಳೆಯರ ಕೊಡುಗೆ

ಪತ್ರೆಮ್ಮ ಕೆ. ಧಾರವಾಡ

ಅತಿಥಿ ಉಪನ್ಯಾಸಕರು, ಕನ್ನಡ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

DOI: https://doi.org/10.5281/zenodo.17255872

## ABSTRACT:

ಸುದೀರ್ಘ ಇತಿಹಾಸ ಹೊಂದಿದ ಕನ್ನಡ ನಾಟಕಗಳ ಬೆಳವಣಿಗೆಯು ಅನೇಕ ಕಾಲಘಟ್ಟಗಳನ್ನು ದಾಟಿ ಬಂದು ಆಧುನಿಕ ಜಗತ್ತಿನಲ್ಲಿಯೂ ನಾಟಕ ತನ್ನ ಹೆಜ್ಜೆಯ ಗುರುತುಗಳನ್ನು ಉಳಿಸಿಕೊಂಡು ಮುಂದುವರೆದಿದೆ. ನಾಟಕವು ಪ್ರಾಚೀನ ಕಲೆಯಾಗಿ, ಕಲಾಪ್ರಕಾರವಾಗಿ ಹೆಚ್ಚು ಮನ್ನಣೆ ಪಡೆದುಕೊಂಡು ದೃಶ್ಯಶ್ರವ್ಯ ಕಾವ್ಯವೂ ಆಗಿದೆ. ಎಲ್ಲಾ ವರ್ಗದ ಜನರನ್ನು ಒಂದೆಡೆ ಕೂಡಿಸಿ, ಎಲ್ಲರಿಗೂ ಮನರಂಜನೆ ಹಾಗೂ ನೀತಿಯನ್ನು ಬೋಧಿಸುವ ಪ್ರದರ್ಶನ ಕಲೆಯಾಗಿ ಮಹತ್ವವನ್ನು ಪಡೆದುಕೊಂಡಿದೆ. ನಾಟಕ ಈ ಪದವನ್ನು ನಾವು ಯಾವ ಅರ್ಥದಲ್ಲಿ ಉಪಯೋಗಿಸುತ್ತೇವೆ? ಎಂಬುದಕ್ಕೆ ಎರಡು ಅರ್ಥಗಳಿವೆ. ಬರೆದಿಟ್ಟ ಸಾಹಿತ್ಯ ಕೃತಿ, ನಾಟಕವು ಒಂದು ಸಾಹಿತ್ಯದ ಪ್ರಕಾರ. ಅದು ಸಂಭಾಷಣೆಗಳಿಂದಲೇ ಕಟ್ಟಿದ ಒಂದು ಭಾಷಾ ಬಂಧ ಎನ್ನುವುದು ಒಂದು ಅರ್ಥವಾದರೆ, ಇನ್ನೊಂದು ಅರ್ಥ ರಂಗನಿರ್ಮಿತಿ ಎನ್ನುವುದು. ನಟರು ರಂಗಭೂಮಿಯ ಮೇಲೆ ವೇಷಭೂಷಣಗಳ ಸಮೇತ ಅಭಿನಯಿಸುವ ಆಟ. ಸಾಹಿತ್ಯ ನಾಟಕದ ಏಕೈಕ ಮಾಧ್ಯಮ ಎಂದರೆ ಭಾಷೆ.

"ಬೇರೆ ಬೇರೆ ರುಚಿಗಳನ್ನು ಏಕಕಾಲದಲ್ಲಿ ತಣಿಸಬಲ್ಲದು ಎಲ್ಲ ಬಗೆಯ ಜನರನ್ನು ಒಮ್ಮೆಗೆ ಸೆರೆಹಿಡಿಯಬಲ್ಲದು". ಎಂಬ ಕಾರಣದಿಂದಲೂ ಸಾಮೂಹಿಕವಾಗಿ ನೋಡಿದಾಗ ದೃಶ್ಯವಾಗುವ ಒಬ್ಬನೇ ಕುಳಿತು ಓದಿ ನಾಲ್ಕು ಜನ ಕೇಳಿದಾಗ 'ಶ್ರವ್ಯಕಾವ್ಯ' ವಾಗುವ ಕಾರಣದಿಂದಲೂ ನಾಟಕ ದೇಶದ ಸಾಹಿತ್ಯದಲ್ಲಿ ಹಿರಿಮೆಯ ಸ್ಥಾನವನ್ನು ಗಳಿಸಿಕೊಂಡಿತು. ಇಂತಹ ಸರ್ವಾಕರ್ಷಣ ಗುಣ ಇರುವುದು ನಾಟಕ ಒಂದರಲ್ಲೇ. ರಂಗಭೂಮಿಯ ಇತಿಹಾಸಕಾರರೂ, ವಿಮರ್ಶಕರೂ ಆದ ಅಲಾರ್ಡಿಸ್ ನಿಕಲ್ ಅವರು ಒಂದು ದೇಶದಲ್ಲಿ ನಾಟಕ ಸಾಹಿತ್ಯಕ್ಕಿರುವ ಸ್ಥಾನವನ್ನು ಕುರಿತು ವಿಮರ್ಶಿಸುತ್ತ "ಸಾಹಿತ್ಯದ ಪ್ರಕಾರಗಳಲ್ಲಿ ನಾಟಕ ಅತ್ಯಂತ ವಿಚಿತ್ರವೂ ಗಹನವೂ ಆದುದು. ನಾಟಕದಲ್ಲಿ ಸಾಮೂಹಿಕ ರಂಜನಾ ಸಾಮರ್ಥ್ಯವಿದೆ. ಒಂದು ನಾಡಿನ ಬಾಹ್ಯ ಜೀವನ ಹಾಗೂ ಅಂತಃಸತ್ವದ ಚಿತ್ರವಿದೆ. ಸಮಾಜ ಧರ್ಮದ ವಿವೇಚನೆಯಿದೆ. ಸಮಾಜದಲ್ಲಿನ ವಿಷಮತೆಯನ್ನು ನಿವಾರಿಸುವ ಮಾರ್ಗದ ನಿರೂಪಣೆಯಿದೆ. ಹಾಸ್ಯವ್ಯಂಗ್ಯಗಳ ಆಳದಲ್ಲಿ ಅದು ನೋಟಕನನ್ನೇ ಮುಳುಗಿಸುವಂತೆ ಕಾವ್ಯಾನುಭವದ ಶಿಖರಕ್ಕೆ ಹತ್ತಿಸಲೂ ಶಕ್ತವಾಗಿದೆ. ಅದರಿಂದ ಮಾನವನ ಬೌದ್ಧಿಕ ಸೃಷ್ಟಿಯಲ್ಲಿ ನಾಟಕ ಅತ್ಯಂತ ಸ್ವಾರಸ್ಯವಾದುದು." ಎಂದಿದ್ದಾರೆ. ನಾಟಕ ಸಾಹಿತ್ಯದಲ್ಲಿ ಅನೇಕ ನಾಟಕಗಳನ್ನು

ಓದುವಾಗ ಅಲ್ಲಿನ ಪಾತ್ರಗಳು ಓದಿಸಿಕೊಂಡು ಹೋಗುವ ರೀತಿ ನಮ್ಮ ಕಣ್ಮುಂದೆ ಒಂದು ರಂಗನಿರ್ಮಿತಿ ಮಾಡಿಬಿಡುತ್ತದೆ.

**KEYWORDS:**
ಬೌದ್ಧಿಕತೆ, ನಾಟಕ, ಶ್ರವ್ಯಕಾವ್ಯ, ರಂಗನಿರ್ಮಿತಿ, ರಂಗಭೂಮಿ, ಕಾವ್ಯಾನುಭವ, ಶಿಖರ.

ಮಹಿಳೆಯರು ಎಂತಹ ಪರಿಸರದಲ್ಲಿ ಬದುಕಿ ಬರೆಯುತ್ತಿದ್ದಾರೆ, ಅವರನ್ನು ಓದುವವರು ಯಾರು, ಅವರ ಬಗ್ಗೆ ಬರೆಯುವವರು ಯಾರು ಎಂಬ ಅಂಶಗಳು ಅವರ ಬರೆಹದ ಸ್ವರೂಪ, ಲಕ್ಷಣಗಳ ಮೇಲೆ ಬಲವಾದ ಪ್ರಭಾವ ಬೀರುತ್ತವೆ. ಉದಾ: ಪುರುಷ ಪ್ರಧಾನವಾದ ವ್ಯವಸ್ಥೆಯಿರುವಲ್ಲಿ ಭಾಷೆ ಹಾಗೂ ಅದರ ಅಂಗವಾದ ಸಾಹಿತ್ಯ ತತ್ವ ಚಿಂತನೆಗಳೆಲ್ಲ 'ಪುರುಷ' ಕೇಂದ್ರಿತ ರೀತಿಯಲ್ಲಿಯೇ ಬೆಳೆದಿರುತ್ತವೆ. ಸಾಹಿತ್ಯದ ಸ್ವರೂಪ ಧ್ಯೇಯ, ಆದರ್ಶ ಮತ್ತು ಅವುಗಳ ಮಾನದಂಡಗಳು ಪುರುಷರಿಗೆ ತಮ್ಮನ್ನೇ ದೃಷ್ಟಿಯಲ್ಲಿಟ್ಟುಕೊಂಡು ರೂಪುಗೊಂಡಿರುವಅಂತಹ ಪರಿಸರದಲ್ಲಿ ಆ ಸಾಹಿತ್ಯಕ್ಕೆ ಪ್ರವೇಶ ಪಡೆಯುವುದು ಮಹಿಳೆಯರಿಗೆ ದುಸ್ತರವಾಗಬಹುದು. ಕನ್ನಡದ ಆಧುನಿಕ ಮಹಿಳಾ ಬರಹಗಾರರ ಮೊದಲ ಪೀಳಿಗೆಗೆ ಸೇರುವ ತಿರುಮಲಾಂಬಾ ಹಾಗೂ ಕಲ್ಯಾಣಮ್ಮ ಹೀಗೆ ಮೊದಲು ಬರಹಗಾರರೆಂದು ತಮ್ಮನ್ನು ಸ್ಥಾಪಿಸಿಕೊಳ್ಳುವುದಕ್ಕೂ ಹೋರಾಡಬೇಕಾಯಿತೆಂಬುದನ್ನು ಗಮನಿಸಬಹುದು ಎಂದು ಡಾ.ಬಿ.ಎನ್.ಸುಮಿತ್ರಾಬಾಯಿ ಅವರು ತಮ್ಮ ಸ್ತ್ರೀವಾದ ಕೃತಿಯಲ್ಲಿ ಹೇಳಿದ್ದಾರೆ.

ಕನ್ನಡ ನಾಟಕ ರಂಗದಲ್ಲಿ ಢಾಳಾಗಿ ಕಾಣುವ ಒಂದು ಕೊರತೆ ಇದೆ. ಅದೇನೆಂದರೆ ಇಲ್ಲಿಯವರೆಗಿನ ಕನ್ನಡ ಸಾಹಿತ್ಯದ ನಾಟಕಕಾರರಲ್ಲಿ ಮಹಿಳಾ ನಾಟಕಕಾರ್ತಿಯರು ಕಾಣದೇ ಇರುವದು ಇದೊಂದು ಸೋಜಿಗವು ಹೌದು. ನಾಟಕ ಕ್ಷೇತ್ರದಲ್ಲಿ ಮಹಿಳಾ ನಾಟಕಕಾರ್ತಿಯರ ಸಂಖ್ಯೆ ವಿರಳಾತಿ ವಿರಳವಾಗಿದೆ. ಇಂಥ ಬೆರಳೆಣಿಕೆಯಷ್ಟಿರುವ ನಾಟಕಕಾರ್ತಿಯರಲ್ಲಿ ತಿರುಮಲೆ ರಾಜಮ್ಮ ಅವರು ರವೀಂದ್ರನಾಥ ಠಾಕೂರರ 'ದೃಢಪ್ರತಿಜ್ಞೆ' ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಬಾಲ್ಯವಿವಾಹ ನಿಷೇಧ, ಬಾಲವಿಧವೆಯರ ಪುನರ್ ವಿವಾಹ ಈ ವಸ್ತುವನ್ನುಳ್ಳ ಮೂರಂಕದ ಒಂದು ನಾಟಕ ರಚಿಸಿದರು. ಅದೇ ಸುಖಮಾರ್ಗ ನಾಟಕ. ಭಾರತೀಯರಿಗೇ ವಿಶೇಷವಾಗಿ ಕೀರ್ತಿಯನ್ನು ತಂದುಕೊಟ್ಟಿದ್ದು ಅವರ ನಾಟಕಗಳು. ಅವು ತಪಸ್ವಿನಿ, ಮಹಾಸತಿ, ವಾತ್ಸಲ್ಯತರಂಗಲೀಲಾ ಈ ಮೂರು ನಾಟಕಗಳು 'ಭಾರತೀರೂಪಕತ್ರಯೀ' ಎನಿಸಿಕೊಂಡಿವೆ. ತಿರುಮಲಾಂಬಾ ಅವರು ರಮಾನಂದ

ಚಂದ್ರವದನ, ಭಾರ್ಗವ ಗರ್ವಭಂಗ, ಭದ್ರಗೀತಾವಳಿ, ಭಕ್ತಿಗೀತಾವಳಿ, ಭಾವಗೀತಾವಳಿ. ಆರ್.ಕಲ್ಯಾಣಮ್ಮ ಅವರು ಬಲಿಪೀಠ, ಬ್ಯಾರಿಸ್ಟರ ರಾಮಚಂದ್ರನ್, ಇಪ್ಪತ್ತನೆಯ ಶತಮಾನದ ಅಳಿಯ, ಯದುರಾಯ, ವರದಕ್ಷಿಣೆ, ದರಿದ್ರ ನಾರಾಯಣ. ಟಿ. ಸುನಂದಮ್ಮ ಅವರು ಆದರ್ಶ ಆಡಂಬರ, ಗೃಹಲಕ್ಷ್ಮಿ, ಚಿಕ್ಕಪ್ಪನ ಉಯಿಲು, ಪೂಜಾವಸಾನಸಮಯೇ, ಧ್ಯಾನಾವಸಾನ ಸಮಯೇ, ಕೂಸು ಹುಟ್ಟುವುದಕ್ಕೆ ಮುಂಚೆ, ಸದಾಶಿವನ ಸ್ವಯಂವಧು, ಚಕ್ರಚುಕ್ಕೆ, ಬಾದರಾಯಿನಿ ಬರೆದ ಕೈ. ಮಲ್ಲಿಕಾ ಘಂಟಿ, ಎಸ್.ಮಾಲತಿ, ಡಿ.ವಿಜಯ, ಡಾ.ವಿಜಯಶ್ರೀ ಸಬರದ ಮತ್ತು ದು.ಸರಸ್ವತಿ ಮೊದಲಾದವರು ಮುಖ್ಯರಾಗಿದ್ದಾರೆ. ಮಲ್ಲಿಕಾ ಘಂಟಿ ಅವರ 'ಚಾಜ', 'ಒಂದು ಬಾವಿಯ ಸುತ್ತ' ನಾಟಕಗಳನ್ನು ಬರೆದಿದ್ದಾರೆ. ಇವು ದಲಿತ ಸಂವೇದನೆ, ದಲಿತಪರ ಕಾಳಜಿ, ಅಸ್ಪೃಶ್ಯ ಹಾಗೂ ದಮನಿತರ ಹಿತಕಾಯುವ ಉದ್ದೇಶಗಳನ್ನು ಹೊಂದಿವೆ. ಸಾಹಿತ್ಯ, ರಂಗಭೂಮಿ, ಸಂಗೀತ, ನೃತ್ಯದಲ್ಲಿ ಒಲವುಳ್ಳವರಾಗಿರುವ ಡಿ.ವಿಜಯ ಅವರು 'ಉಳ್ಳವರ ನೆರಳು', 'ಬಂದರೋ ಬಂದರು', 'ಮುಖವಿಲ್ಲದವರು', 'ಕೇಳ್ರಪ್ಪೋ ಕೇಳ್ರಿ', 'ಎಲ್ಲಿದ್ದೇವೆ ನಾವು ಎಲ್ಲಿದ್ದೇವೆ', 'ಧನ್ವಂತರಿ ಚಿಕಿತ್ಸೆ', 'ಮಾನಿಷಾದ' ಎಂಬ ನಾಟಕಗಳನ್ನು ಬರೆದಿದ್ದಾರೆ. ಎಸ್.ಮಾಲತಿ ಅವರು 'ದಲಿತಲೋಕ' ಎಂಬ ನಾಟಕವನ್ನು ರಚಿಸಿದ್ದಾರೆ. ಡಾ.ವಿಜಯಶ್ರೀ ಸಬರದ ಅವರು 'ಉರಿಲಿಂಗ' ನಾಟಕ ಬರೆದಿದ್ದಾರೆ. ಎನ್.ರತ್ನ ಅವರು ಎಲ್ಲಿಗೆ, ಗೋಡೆ ಬೇಕೆ ಗೋಡೆ, ಬೊಂತೆ. ಗೀತಾ ನಾಗಭೂಷಣ ಅವರ ಜೋಗಿಣಿ. ವೈದೇಹಿ ಅವರ ಐದು ಮಕ್ಕಳ ನಾಟಕಗಳು, ಎರಡು ಮಕ್ಕಳ ನಾಟಕಗಳು, ಮೂರು ಮಕ್ಕಳ ನಾಟಕಗಳು, ಸೋಮಾರಿ ಓಲ್ಯಾ, ಆನೆ ಬಂತೋ ಆನೆ, ಕೋಟುಗುಮ್ಮ, ಅರ್ಧಚಂದ್ರ ಮಿಠಾಯಿ, ನಾಯಿಮರಿ ನಾಟಕ, ಡಾಣಾ ಡಂಗುರ, ಸೂರ್ಯ ಬಂದ, ರಾಜಾ ಲಿಯರ, ಗೊಂಬೆ ಮ್ಯಾಕ್ಬೆತ್. ಅನುಪಮಾ ನಿರಂಜನ ಅವರ ಕಲ್ಲೋಲ ನಾಟಕ. ಹೀಗೆ ಪುರುಷ ನಾಟಕಕಾರರಿಗಿಂತ ಕಡಿಮೆ ಇಲ್ಲ ಎನ್ನುವ ಮಾತನ್ನು ಮಹಿಳಾ ನಾಟಕಕಾರ್ತಿಯರು ಸಾಬೀತು ಮಾಡಿದ್ದಾರೆ.

ವೀಣಾ ಶಾಂತೇಶ್ವರ ಅವರು ತಮ್ಮ ಅನೇಕ ಕತೆಗಳನ್ನು ರೇಡಿಯೋ ನಾಟಕಗಳನ್ನಾಗಿ ರೂಪಾಂತರಿಸಿದ್ದಾರೆ. 'ರಂಗನವಮಿ' ವೀಣಾ ಶಾಂತೇಶ್ವರ ಅವರ ಒಂಬತ್ತು ನಾಟಕಗಳ ಸಂಕಲನವಾಗಿದೆ. ವೀಣಾ ಶಾಂತೇಶ್ವರ ಅವರು ಬರೆದದ್ದು ಕೇವಲ ತಮ್ಮ ಪೀಳಿಗೆಯವರ ತಲ್ಲಣಗಳ ಬಗ್ಗೆ ಮಾತ್ರವಲ್ಲ. ಅವರ ಬರವಣಿಗೆಯ ಕೇಂದ್ರದಲ್ಲಿ ಹೆಣ್ಣು ಇರುವುದಾದರೂ ಅವರು ಕೇವಲ ಹೆಂಗಸರ ಬಗ್ಗೆ ಬರೆಯುತ್ತಿಲ್ಲ. ಅವರ ಬರವಣಿಗೆ ಮನುಷ್ಯರ ಕುರಿತಾದದ್ದು. ಇವರು ಹೆಂಗಸರನ್ನು ಗಂಡಸರ ಕಣ್ಣುಗಳ ಮೂಲಕ ಚಿತ್ರಿಸದೆ ಇರುವುದು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ದೇಹ ಭಾವನೆಯ ವಿಚಾರಗಳು ಮತ್ತು ತಾತ್ವಿಕತೆ ಇರುವ ಹೆಣ್ಣನ್ನು ವೀಣಾ ಅವರು

ಕಟ್ಟಿಕೊಟ್ಟರು. ಪ್ರೀತಿಯ ಹಂಬಲ ಇವರ ಸಾಹಿತ್ಯವನ್ನು ನೋಡಿದಾಗ ಅರಿವಿಗೆ ಬರುತ್ತದೆ. ಪ್ರೀತಿಯ ಕ್ಷಣಗಳು ಎಷ್ಟೇ ಕ್ಷಣಿಕವೆನಿಸಿದರೂ ಕೂಡ ನಾಯಕಿಯರು ಜೀವಂತಿಕೆಯನ್ನು ಅನುಭವಿಸುವುದು ಪ್ರೀತಿಯ ಹಂಬಲದಲ್ಲಿಯೇ. ಅವರ ನಾಟಕಗಳಲ್ಲಿ ನೆನಪುಗಳಿಗೆ ಮಹತ್ವವಿದೆ. ನಾಯಕಿಯರಲ್ಲಿ ಬಹಳಷ್ಟು ಜನ ಭೂತಕಾಲದ ನೆನಪುಗಳಿಂದ ನರಳುವವರೇ. ಸುಖ, ಸಮೃದ್ಧಿಗಳತ್ತ ವರ್ತಮಾನ ಕರೆದರೂ ಅವರ ನೆನಪುಗಳು ಭೂತಕಾಲಕ್ಕೆ ಕಟ್ಟಿಹಾಕುತ್ತವೆ. ಸುದೈವಿಗಳಿಗೆ ಮಾತ್ರ ಬಿಡುಗಡೆ ದೊರೆಯುತ್ತದೆ. ವೀಣಾರವರು ಹೆಣ್ಣಿನ ಮನದ ತಲ್ಲಣಗಳನ್ನು ಪ್ರಾಮಾಣಿಕವಾಗಿ ಚಿತ್ರಿಸುವ ಮೂಲಕ ಅವಳನ್ನು ಒಂದು ಆದರ್ಶದ ಚೌಕಟ್ಟಿನಿಂದ ಹೊರತಂದು ಒಬ್ಬ ಸಾಮಾನ್ಯ ಮಹಿಳೆಯಾಗಿ ಕಾಣಿಸುತ್ತಾರೆ.

ಭಾರತೀಯ ಕಾವ್ಯ ಪುರಾಣದಲ್ಲಿ ಸ್ತ್ರೀ ಪಾತ್ರಗಳು ಬಹಳ ಮುಖ್ಯವಾಗಿ ಕಂಡು ಬಂದರೂ ಕೂಡ ಸ್ತ್ರೀ ಶೋಷಣೆಯ ವಿರುದ್ಧ ಪ್ರತಿಭಟಿಸುವ ಶಕ್ತಿಯನ್ನು ಅಲ್ಲಿಂದ ಇಲ್ಲಿಯವರೆಗೂ ಪಡೆದುಕೊಂಡಿಲ್ಲ. ವೀಣಾ ಶಾಂತೇಶ್ವರ ಅವರು ಸ್ತ್ರೀ ಸಂವೇದನೆಯ ಮತ್ತು ಸ್ತ್ರೀಪರ ಕಾಳಜಿವುಳ್ಳ ಲೇಖಕರು. ಅವರ 'ತಿರುಗಿ ಹೋದಳು' ನಾಟಕ ಸ್ತ್ರೀಯರ ನೋವು ನಲಿವು ಹತಾಶೆಗಳನ್ನು ಪ್ರತಿಬಿಂಬಿಸುವಅಂತದ್ದು. ಹಮೀದಾಬಾನುವಿನ ಜೀವನವನ್ನು ನೋಡಿ ಲಕ್ಷ್ಮಿ ಆಕೆಗೆ ನಿನ್ನ ಗಂಡನನ್ನು ಹತ್ತಿರ ಸೇರಿಸಬೇಡ ಅವನು ಮನುಷ್ಯನೇ ಅಲ್ಲ ಎಂದಾಗ ಹಮೀದಾಬಾನು ತಲೆತಗ್ಗಿಸಿ ನಿಲ್ಲುತ್ತಿದ್ದಳೇ ವಿನಃ ಗಂಡನನ್ನು ತಿರಸ್ಕರಿಸಲಾರಳು. ಲಕ್ಷ್ಮಿಯ ಬದುಕಿನಲ್ಲಿ ಅಂತಹ ಪರಿಸ್ಥಿತಿ ಘಟಿಸಿದಾಗ ಹಮೀದಾಬಾನುವಿನ ಸಂಕಟ ನೋವು ಅರ್ಥವಾಗುತ್ತದೆ. ಒಟ್ಟಿನಲ್ಲಿ 'ಬಟ್ಟೆ ಮುಳ್ಳಿನ ಮೇಲೆ ಬಿದ್ದರೂ ಮುಳ್ಳು ಬಟ್ಟೆಯ ಮೇಲೆ ಬಿದ್ದರೂ ಹಾನಿಯಾಗುವುದು ಮಾತ್ರ ಬಟ್ಟೆಗೆ' ಎನ್ನುವಂತೆ ಮಹಿಳೆಯರ ಬದುಕಿನ ಧಾರುಣತೆ, ಪುರುಷ ಸಮಾಜದ ಅಟ್ಟಹಾಸ, ಮಹಿಳೆಯರ ಬದುಕಿನ ತಾಕಲಾಟವನ್ನು ವ್ಯಕ್ತಪಡಿಸಿದ್ದಾರೆ. ಕವಲು, ಬಿಡುಗಡೆ, ಅವಳ ಸ್ವಾತಂತ್ರ್ಯ. ನಿರಾಕರಣೆ, ಎಲ್ಲ ನಾಟಕಗಳಲ್ಲಿ ಬದುಕಿನ ಆಶಯವನ್ನು ಅಲ್ಲಿಯ ಮನಸ್ಥಿತಿಗಳನ್ನು ಸಂಭಾಷಣೆಗಳ ಮೂಲಕ ತಿಳಿಸಿಕೊಡುತ್ತಾರೆ. ಬದುಕಿ ಉಳಿಯುವುದಕ್ಕೆ ಸ್ತ್ರೀ ತನ್ನ ಸ್ವಾತಂತ್ರ್ಯ, ಸ್ವಾಭಿಮಾನ, ಆಸೆ ಆಕಾಂಕ್ಷೆಗಳು, ಮರ್ಯಾದೆ ಯೋಗ್ಯತೆಗಳನ್ನು ಹೇಗೆ ಕಳೆದುಕೊಳ್ಳಬೇಕಾಗುತ್ತದೆ ಎನ್ನುವ ಧಾರುಣತೆ ಇವರ ನಾಟಕದಲ್ಲಿದೆ. ಮಹಿಳಾವಾದಿಗಳು, ಸಂಪ್ರದಾಯಸ್ಥ ಪುರುಷರು ಇವರ ನಾಟಕಗಳನ್ನು ಓದಬೇಕು. ಹೆಣ್ಣಿನ ಕನಸು ಮತ್ತು ಪುರುಷ ದೌರ್ಜನ್ಯದ ಕುರಿತು ಇಲ್ಲಿ ಚಿತ್ರಿಸಿದ್ದಾರೆ. ಕೊನೆಯಲ್ಲಿ ಬಂಡಾಯವೇ ಆಗಿ ಓದುಗರನ್ನು ಚಕಿತಗೊಳಿಸಿ ಮೂಕವಿಸ್ಮಿತರನ್ನಾಗಿಸುತ್ತದೆ.

ದು.ಸರಸ್ವತಿ ಅವರ 'ಸತ್ಯ ಉಡ್ಕದ್ಮೂಂದ್ರೆ' ನಾಟಕ ಹೆಣ್ಣು ಕೋರ್ಟಿನಲ್ಲಿ ಹೋರಾಟ ಮಾಡುವ ಕಥೆ. ಹೆಣ್ಣಿನ ನೋವು, ಅನ್ಯಾಯ, ಶೋಷಣೆಯನ್ನು ಹೇಳಲು

ಪ್ರಯತ್ನಿಸುವ ನ್ಯಾಯದ ನೈತಿಕತೆಯನ್ನು ಸಾರುವ ನಾಟಕವಾಗಿದೆ. 'ಲವ್ ಪುರಾಣ' ನಾಟಕವು ಜೀವನದಲ್ಲಿ ಮಾನವೀಯತೆ, ಮನುಷ್ಯ ಸಂಬಂಧ, ದಾಂಪತ್ಯ, ಪ್ರೀತಿ ತುಂಬಿದ ನಡೆಯನ್ನು ವಿಶ್ಲೇಷಿಸುತ್ತದೆ. 'ಬುದ್ಧಾಯಣ' ನಾಟಕವು ದಲಿತರ ಮೇಲೆ ನಡೆಯುತ್ತಿರುವ ಶೋಷಣೆಯ ಕುರಿತು ಹೇಳುತ್ತದೆ. ವೈದಿಕ ಪುರೋಹಿತಶಾಹಿ ಸೃಷ್ಟಿಸಿದ ಅಸಮಾನತೆ ಮತ್ತು ತಾರತಮ್ಯದ ನೀತಿಯನ್ನು ವಿರೋಧಿಸಿದ್ದು, ಅಂಬೇಡ್ಕರ್ ಅವರು ಬೌದ್ಧ ಧರ್ಮಕ್ಕೆ ಮತಾಂತರವಾಗಿದ್ದು ಬುದ್ಧ ತನ್ನ ತ್ರಿಪಿಟಕಗಳಲ್ಲಿ ಮನುಷ್ಯನ ಸಹ ಸಂಬAಧ, ದಯೆ, ತ್ಯಾಗ, ಮಮತೆ, ಪ್ರೀತಿಯನ್ನು ಸಕಲ ಪ್ರಾಣಿಗಳಲ್ಲೂ ಕಾಣುವಂತೆ ಬೋಧಿಸಿದ್ದನ್ನು ಚರ್ಚಿಸುತ್ತದೆ. ವೈದಿಕ ಧರ್ಮವು ಜಾತೀಯತೆ, ಅಸ್ಪೃಶ್ಯತೆ, ಶೋಷಣೆ, ತಾರತಮ್ಯ ಇವೆಲ್ಲ ಕ್ರಿಯೆಗಳು ಮನುಷ್ಯರಲ್ಲಿ ಸಂಧಿಗ್ಧತೆಯನ್ನು ಉಂಟುಮಾಡಿತು. ಆದರೆ ಬೌದ್ಧ ಧರ್ಮವು ಅಳವಡಿಸಿಕೊಂಡ ಮಾನವೀಯ ನೆಲೆಗಳಿಂದ ದಲಿತರು ಆಕರ್ಷಿತರಾದರು. ಮನುಷ್ಯರನ್ನು ಮನುಷ್ಯರಂತೆ ಕಾಣುವ, ಪ್ರೀತಿ ತೋರಿಸುವ ಮಾನವ ಕರುಣೆಯುಳ್ಳ ಬೌದ್ಧಧರ್ಮವು ಉತ್ತಮವೆಂದು ನಾಟಕವು ವ್ಯಕ್ತಪಡಿಸುತ್ತದೆ. 'ರೆಕ್ಕೆ ಕಟ್ಟುವಿರಾ' ನಾಟಕವು ಆಧುನಿಕ ಜಗತ್ತಿನಲ್ಲಿ ಸಿಲುಕಿ ತತ್ತರಿಸಿದ ತಾಯಿಮಗಳ ಕತೆಯನ್ನು ತಿಳಿಸುವಂತದ್ದು. ಎರಡನೆ ಮಹಾಯುದ್ಧ ಸಂದರ್ಭದಲ್ಲಿಯ ವಿಷಯ ನಾಟಕದ ವಸ್ತು. ಈ ಯುದ್ಧದ ಭೀಕರ ಧಾರುಣತೆಯನ್ನು ಪುಟ್ಟ ಕುಟುಂಬದ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ದು. ಸರಸ್ವತಿ ಅವರು ಮಾಡಿದ್ದಾರೆ.

ದು.ಸರಸ್ವತಿಯವರ 'ಸಣ್ತಮ್ಮಿ ಪುರಾಣ' ಆರು ಏಕಾಂಕ ನಾಟಕಗಳನ್ನು ಒಳಗೊಂಡಿದೆ. ಇದರ ಮೊದಲ ನಾಟಕ 'ರಾಮಾಯ್ಣ' ಪೌರಾಣಿಕ ನಾಟಕ. ರಾಮಾಯಣದ ಕಥೆಯನ್ನು ವರ್ತಮಾನಕ್ಕೆ ಸರಿಹೊಂದುವಅಂತೆ ರಚಿಸಲಾಗಿದೆ. ಮಹಿಳಾ ದೃಷ್ಟಿಕೋನದಲ್ಲಿ ಈ ನಾಟಕವನ್ನು ಗ್ರಹಿಸಲಾಗಿದೆ. ಹೆಣ್ಣು ಎಲ್ಲಾ ಕಾಲದಲ್ಲಿಯೂ ಶೋಷಣೆಯ ಭಾಗವಾಗಿಯೇ ರೂಪಗೊಂಡಿರುತ್ತಾಳೆ. ಮಹಿಳೆಯಾದವಳು ಸಂಸಾರದ ಜವಾಬ್ದಾರಿಯನ್ನು ನಿರ್ವಹಿಸಬೇಕು. ಆದರೆ ಆಕೆಯ ಸಂಕಟ, ನೋವು, ನಲಿವು, ಹತಾಶೆಯನ್ನು ಯಾರು ಗಮನಿಸುವುದಿಲ್ಲ. ಪುರಾಣ ವಸ್ತುವನ್ನು ಬಳಸಿಕೊಂಡು ವರ್ತಮಾನದ ಜಗತ್ತನ್ನು ವಿಮರ್ಶೆಗೆ ಹಚ್ಚುವುದು ಇಲ್ಲಿ ಕಂಡು ಬರುವಂತದ್ದು. ಸಣ್ತಮ್ಮಿಯ ಕಣ್ಣಲ್ಲಿ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಸಂಗತಿಗಳನ್ನು ನೋಡಿದ್ದಾರೆ. ಗ್ರಾಮೀಣ ಭಾಷೆಯಲ್ಲಿ ಕತೆ ಸಾಗುತ್ತದೆ. ಪುರಾಣಗಳಲ್ಲಿ ವಾಸ್ತವದ ಕತೆಗಳನ್ನು ದಾಟಿಸುತ್ತ ಶೋಷಿತರ ಧ್ವನಿಯಂತೆ ಪ್ರತಿಭಟಿಸುತ್ತ ಮಹಿಳಾಪರ ಹೋರಾಟಗಾರ್ತಿಯಾಗಿ ಸಣ್ತಮ್ಮಿಯನ್ನು ಕಣ್ಮುಂದೆ ನಿಲ್ಲಿಸುತ್ತಾರೆ ದು.ಸರಸ್ವತಿ ಅವರು.

ಎಸ್ ಮಾಲತಿ ಅವರು ರಚಿಸಿರುವ 'ದಲಿತಲೋಕ' ಈ ನಾಟಕವು ದಲಿತರ ಬದುಕಿನ ದುರಂತವನ್ನು ಚಿತ್ರಿಸುತ್ತದೆ. ಅಸ್ಪೃಶ್ಯತೆ, ಸಾಮಾಜಿಕ ಬಹಿಷ್ಕಾರ, ಆರ್ಥಿಕ

ಶೋಷಣೆಗಳು, ದಲಿತರ ಕಗ್ಗೊಲೆ, ದಲಿತ ಹೆಣ್ಣುಮಕ್ಕಳ ಮಾನಭಂಗ, ಶೋಷಣೆ, ಅವಮಾನ ಮೊದಲಾದ ನೈಜ ಘಟನೆಗಳ ಹಿನ್ನಲೆಯಲ್ಲಿ ರೂಪಿತವಾಗಿರುವಂತದ್ದು. ಸಮಸಮಾಜವನ್ನು ಕಟ್ಟುವುದಕ್ಕಾಗಿ ಎಲ್ಲ ವರ್ಗದ ದಮನಿತರು ಒಂದೆಡೆ ಸೇರಿ ಹೋರಾಟ ಮಾಡಬೇಕಾದ ಆಶಯವನ್ನು ದಲಿತಲೋಕ ನಾಟಕ ಕಟ್ಟಿಕೊಟ್ಟಿದೆ.

ಶ್ರೀಮತಿ ವಿಜಯಾ ಅವರ 'ಬಂದರೋ ಬಂದರು' ಇದೊಂದು ಬೀದಿ ನಾಟಕ. ಎಪ್ಪತ್ತರ ದಶಕದಲ್ಲಿ ರಚಿತವಾದಂತಹ ಸಮಕಾಲೀನ ಸಮಾಜದ ಚಿತ್ರಣವನ್ನು ಒಳಗೊಂಡಿದೆ. ಮೇಲ್ವರ್ಗಗಳಿಂದ, ಪ್ರಭಾವಿ ವ್ಯಕ್ತಿಗಳಿಂದ ಅನುಭವಿಸುವ ಶೋಷಣೆ, ಅನ್ಯಾಯ, ದೌರ್ಜನ್ಯ, ದಬ್ಬಾಳಿಕೆಗಳಿಂದ ಸಾಮಾನ್ಯ ಜನರು ಅನುಭವಿಸುತ್ತಿರುವ ನೋವುಗಳನ್ನು ಚಿತ್ರಿಸುತ್ತದೆ. ದೇವರ ಹೆಸರಿನಲ್ಲಿ ಶೋಷಣೆ ಯಾವ ರೀತಿಯಲ್ಲಿ ನಡೆಯುತ್ತದೆ ಎನ್ನುವ ವಿಚಾರವನ್ನು ಒಬ್ಬ ರಾಜಕಾರಣೀಯ ಪಾತ್ರದ ಮೂಲಕ ಶ್ರೀಮತಿ ವಿಜಯಾ ಅವರು ನಿರೂಪಿಸಿದ್ದಾರೆ. ರಾಜಕಾರಣೀಗಳು ಹಾಕುವ ವೇಷವನ್ನು ಡೊಂಗಿತನವನ್ನು ಬಹಿರಂಗವಾಗಿ ಹೊರತೆಗೆಯುವ ಪ್ರಕ್ರಿಯೆ ಇಲ್ಲಿದೆ. ಸರಳವಾದ ಭಾಷೆಯೊಂದಿಗೆ ಓದುಗರ ಪ್ರೇಕ್ಷಕರ ಮನಮುಟ್ಟುವಂತೆ ಯಶಸ್ವಿಯಾಗಿದೆ.

ಬಿ.ಟಿ.ಲಲಿತಾನಾಯಕ ಅವರ 'ಚಂದ್ರಪರಾಭವ' ನಾಟಕಗಳ ಸಂಕಲನವಾಗಿದೆ. ಚಂದ್ರಪರಾಭವ ಈ ಸಂಕಲನದಲ್ಲಿಯ 'ಬುದ್ವಂತರು' ನಾಟಕದಲ್ಲಿ ಪುರೋಹಿತಶಾಹಿ ವ್ಯವಸ್ಥೆಯು ಸಮಾಜದಲ್ಲಿ ಮೂಡಿಸುವ ಮೌಢ್ಯ ಅದರಿಂದ ತಮಗಾಗುವ ಲಾಭ ಕುರಿತು ವಿವರಿಸುತ್ತದೆ. ಆಕಸ್ಮಾತ್ತಾಗಿ ಈ ನಾಟಕದಲ್ಲಿ ಕೋತಿಯು ಸತ್ತು ಹೋಗುತ್ತದೆ. ಕೋತಿ ದೇವರ ಸ್ವರೂಪ ಎಂದೂ ಅದನ್ನು ಸಾಯಿಸಿರುವ ಪಾಪ ಮನೆಯನ್ನು ಆವರಿಸುತ್ತದೆ ಎಂಬ ನಂಬಿಕೆಯಿಂದಲೇ ಕಥಾ ಹಂದರ ಕೋತಿಯ ಹೆಣದ ಸುತ್ತ ದಾಖಲಾಗಿದೆ. ದೇವರ ಕಲ್ಪನೆಯನ್ನು ಹುಟ್ಟುಹಾಕುವ ಮೂಲಕ ಜನಸಾಮಾನ್ಯರಲ್ಲಿ ಭಯ, ಆತಂಕವನ್ನು ಬಿತ್ತರಿಸಿರುವುದು ಈ ನಾಟಕದಲ್ಲಿ ಮೂಡಿಬಂದಿದೆ. ಶ್ರಮವಿಲ್ಲದೆಯೇ ಹಣವನ್ನು ಸಂಪಾದಿಸುವುದು ಮತ್ತು ಪುರೋಹಿತರು ಮಾಡುತ್ತಿರುವ ಮೋಸದ ಕುರಿತು ನಾಟಕ ಚರ್ಚಿಸುತ್ತದೆ. 'ಪರ್ಯಾವಸಾನ' ನಾಟಕವು ಹೆಣ್ಣಿನ ಸಬಲೀಕರಣದ ಚರ್ಚೆಯನ್ನು ತಿಳಿಸುತ್ತದೆ. ಕುಟುಂಬದಲ್ಲಿರುವ ಹೆಣ್ಣುಮಕ್ಕಳನ್ನು ತಂದೆತಾಯಿಯರು ಹೆಣ್ಣನ್ನು ಹೊರೆಯಾದ ವಸ್ತು ಎಂದು ಮದುವೆಮಾಡಿ ತಮ್ಮ ಜವಾಬ್ದಾರಿ ಮುಗಿಸಬೇಕು ಎಂದುಕೊಳ್ಳುವುದನ್ನು ನಾಟಕ ವಿಮರ್ಶಿಸುತ್ತದೆ. 'ಎಲ್ಲಾ ಗೋವಿಂನಾಟ' ನಾಟಕವು ಎರಡು ತಲೆಮಾರುಗಳ ನಡುವೆ ನಡೆಯುವ ನಾಟಕ. ಶಿಕ್ಷಣ, ವೈಚಾರಿಕತೆ, ವೈಜ್ಞಾನಿಕ ಭಾವಗಳ ಕುರಿತು ನಾಟಕ ತಿಳಿಸುತ್ತದೆ. ಆಧುನಿಕತೆ ಮತ್ತು ಪರಂಪರೆಯ ಮುಖಾಮುಖಿಯಲ್ಲಿಯ ಸಂಘರ್ಷದ ಆಯಾಮವನ್ನು ಇಲ್ಲಿ ನೋಡಬಹುದು. ಸೋಮಣ್ಣ ತನ್ನ ತಂದೆಯ ಸಹಕಾರದಿಂದ ಉನ್ನತ ಶಿಕ್ಷಣ ಪಡೆದು ಮದುವೆಯ ವಿಷಯ ಬಂದಾಗ ತಂದೆ ಮತ್ತು ಮಗನ ನಡುವೆ ವರದಕ್ಷಿಣೆ

ಪ್ರಸ್ತಾಪವಾಗಿ ವರದಕ್ಷಿಣೆ ಕೊಡುವ ಮನೆಯ ಹುಡುಗಿಯನ್ನು ತಂದೆ ಹುಡುಕುತ್ತಾನೆ. ಸೋಮಣ್ಣ ವರದಕ್ಷಿಣೆಯನ್ನು ನಿರಾಕರಿಸಿ ವಸಂತಳನ್ನು ಮದುವೆಯಾಗಲು ಬಯಸುತ್ತಾನೆ. ತಂದೆ ಮತ್ತು ಮಗನ ನಡುವಿನ ಬಿಕ್ಕಟ್ಟನ್ನು ಎರಡು ತಲೆಮಾರಿನ ಅಂತರದಲ್ಲಾದ ವೈಚಾರಿಕ ಮನೋಭಾವನೆಯನ್ನು ಈ ನಾಟಕದಲ್ಲಿ ವಿವೇಚಿಸುತ್ತದೆ. ಹೀಗೆ ಬಿ.ಟಿ.ಲಲಿತಾನಾಯಕ ಅವರು ಸ್ತ್ರೀಪರ ಚಿಂತನೆಗಳನ್ನು ಒಳಗೊಂಡಿರುವ ನಾಟಕಗಳನ್ನು ರಚಿಸಿದ್ದಾರೆ.

ಡಾ. ಮಲ್ಲಿಕಾ ಘಂಟಿಯವರು ಮೂಲತಃ ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಅಗಸಬಾಳ ಗ್ರಾಮದವರು. ಪಿಎಚ್.ಡಿ ಪದವಿದರರಾದ ಇವರು ಮಹಿಳಾ ಸಾಹಿತಿಗಳಲ್ಲಿ ಒಬ್ಬರು. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾದುದು. ಇವರ ಸಾಹಿತ್ಯ ಕೃಷಿಯಲ್ಲಿ ಮೂಡಿ ಬಂದ ಕೃತಿಗಳಲ್ಲಿ ಸೃಜನಸಾಹಿತ್ಯ, ಜೀವನ ಚರಿತ್ರೆಗಳು, ಸಂಪಾದನಾ ಸಾಹಿತ್ಯಕ್ಕೆ ಸಂಬAಧಿಸಿದ ಗ್ರಂಥಗಳನ್ನು ರಚಿಸಿದ್ದಾರೆ. ನಾಟಕ ಕ್ಷೇತ್ರಕ್ಕೆ ನೀಡಿದ ಮೊದಲ ಕೊಡುಗೆಯಾಗಿ ಇವರು ರಚಿಸಿದ ಎರಡು ನಾಟಕಗಳು ಓದುಗರ ಗಮನ ಸೆಳೆದಿವೆ. ಅವುಗಳೆಂದರೆ 'ಚಾಜ', ಮತ್ತು 'ಒಂದು ಬಾವಿಯ ಸುತ್ತ'. ಈ ನಾಟಕಗಳು ಸಾಮಾಜಿಕವಾಗಿ ಮಹಿಳೆಯರು ಮತ್ತು ದಲಿತರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ಮತ್ತು ಧಾರ್ಮಿಕ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ಎತ್ತಿ ತೋರಿಸುವ ವಿಶಿಷ್ಟ ನಾಟಕಗಳಾಗಿವೆ. 'ಒಂದು ಬಾವಿಯ ಸುತ್ತ' ನಾಟಕವು ಗ್ರಾಮೀಣ ಪ್ರದೇಶದಲ್ಲಿ ದಲಿತರು ಅನುಭವಿಸುತ್ತಿರುವ ಅಸ್ಪೃಶ್ಯತೆ ಇನ್ನು ಜೀವಂತವಾಗಿದೆ ಎಂಬುದನ್ನು ತಿಳಿಸುತ್ತದೆ. ಒಂದು ಹನಿ ನೀರಿಗಾಗಿ ದಲಿತರು ಮೇಲ್ವರ್ಗದವರಿಂದ ಅನುಭವಿಸುತ್ತಿರುವ ನೋವು ಈ ನಾಟಕದ ವಸ್ತು. ದಲಿತರ ಜೀವನ ಸ್ಥಿತಿ ಯಾವ ರೀತಿಯಲ್ಲಿ ಹೀನಾಯವಾಗಿದೆ ಎಂಬುದನ್ನು ಬಿಂಬಿಸುತ್ತದೆ. ಸಮಾಜದ ಸಾಮರಸ್ಯವನ್ನೇ ಧ್ಯೇಯವನ್ನಾಗಿ ಇಟ್ಟುಕೊಂಡು ಡಾ. ಮಲ್ಲಿಕಾ ಘಂಟಿ ಅವರು ರಚಿಸಿದ್ದಾರೆ.

ಡಾ. ಮಲ್ಲಿಕಾ ಘಂಟಿಯವರು ಮಹಿಳಾ ಬಂಡಾಯ ಸಾಹಿತಿಗಳಾಗಿದ್ದು, ಸ್ತ್ರೀವಾದಿ ಚಿಂತಕರೂ ಹೌದು. ಹೋರಾಟದ ಮನೋಭಾವವುಳ್ಳ ಅವರು ಸಮಾಜದಲ್ಲಿ ಆಚರಣೆಗಳ ಮೂಲಕ ಮಹಿಳೆಯರನ್ನ ಹಿಂಸಿಸುತ್ತಿರುವ ಪದ್ಧತಿಗಳ ವಿರುದ್ಧ ನಡೆಯುವ ಕ್ರೌರ್ಯವನ್ನು ವಸ್ತುವನ್ನಾಗಿಸಿಕೊಂಡು 'ಚಾಜ' ನಾಟಕವನ್ನು ರಚಿಸಿದ್ದಾರೆ.

'ಚಾಜ' ಅಂದರೆ ನಿಯಮ, ಪದ್ಧತಿ ಎಂದರ್ಥ. ಇದು ವಿಜಯಪುರ ಹಾಗೂ ಉತ್ತರ ಕರ್ನಾಟಕದಲ್ಲಿರುವ ಒಂದು ಆಚರಣೆಯಾಗಿದೆ. ಜಮೀನ್ದಾರಿ ವ್ಯವಸ್ಥೆಯಲ್ಲಿ ಹಳ್ಳಿಗಳಲ್ಲಿ ರೂಢಿಯಲ್ಲಿದ್ದ ಈ ಪದ್ಧತಿಯಿಂದ ಮಹಿಳೆಯ ಮೇಲೆ ನಡೆಯುತ್ತಿದ್ದ ಮಾನಸಿಕ ಹಿಂಸಾಚಾರವನ್ನು ಈ ನಾಟಕ ಎತ್ತಿ ತೋರುತ್ತದೆ. ಡಾ. ಸಿದ್ದನಗೌಡ

ಪಾಟೀಲ ಅವರು ಹೇಳುವಂತೆ "ಜಮೀನ್ದಾರಿ ವ್ಯವಸ್ಥೆಯಲ್ಲಿ ಮದುವೆಯ ನಂತರ ಮನೆಗೆ ಬರಬೇಕಾದ ಸೊಸೆ ಊರ ಗೌಡ ಅಥವಾ ದೇಸಾಯಿ ಮನೆಯಲ್ಲಿ ಅವನ ತೆಕ್ಕೆಯಲ್ಲಿ ಮೊದಲರಾತ್ರಿ ಕಳೆಯಬೇಕಾಗಿತ್ತು. ಹಬ್ಬ ಹರಿದಿನದ ಎಲ್ಲಾ ಕ್ರಿಯೆಗಳು ಗೌಡ ದೇಸಾಯಿಗಳ ಮನೆಯಿಂದಲೇ ಅವರ ನಾಯಕತ್ವದಲ್ಲಿ ಆರಂಭಗೊಳ್ಳುತ್ತವೆ. ಇದೆಲ್ಲ 'ಚಾಜ'." ಇದು ಪುರೋಹಿತಶಾಹಿಗಳು ನಿರ್ಮಿಸಿಕೊಂಡಅಂತಹ ಕೆಟ್ಟ ಸಂಪ್ರದಾಯವನ್ನು ಹೇಳುತ್ತದೆ. ಇಲ್ಲಿ ಮಹಿಳೆಯರು ಬಹಿರಂಗವಾಗಿಯೇ ಅತ್ಯಾಚಾರಕ್ಕೆ ಆಚರಣೆಯ ಹೆಸರಿನಲ್ಲಿ ಬಲಿಯಾಗುತ್ತಿರುವುದನ್ನು ಬಿಂಬಿಸುತ್ತದೆ. ಇದರ ಪ್ರತಿಧ್ವನಿಯಾಗಿ ಹುಟ್ಟಿಕೊಂಡ ನಾಟಕವೇ 'ಚಾಜ'.

'ಚಾಜ' ನಾಟಕದಲ್ಲಿ ಹನ್ನೊಂದು ದೃಶ್ಯಗಳು, ಹದಿನೇಳು ಪಾತ್ರಗಳು ಕಂಡು ಬರುತ್ತವೆ. ಗ್ರಾಮೀಣ ಭಾಗಗಳಲ್ಲಿ ಹವ್ಯಾಸಿ ನಾಟಕದಲ್ಲಿ ಮತ್ತು ಬಯಲಾಟಗಳಲ್ಲಿ ಹೇಳುವಂತೆ ಸೂತ್ರಧಾರನ ಪಾತ್ರದಿಂದ ನಾಟಕ ಪ್ರಾರಂಭವಾಗುತ್ತದೆ. ಸೂತ್ರಧಾರನ ಮಾತುಗಳು ನಾಟಕದ ವಸ್ತುವನ್ನು ಪ್ರತಿನಿಧಿಸುತ್ತದೆ. "ಕಾಲಕ್ಕೆ ನಾಲಗೆ ಏನಾದ್ರೂ ಇತ್ತ ಅಂದಿದ್ರ ಎಲ್ಲಾ ನೆಕ್ಕಿ ಸ್ವಚ್ಛ ಮಾಡತಿತ್ತ. ಆದ್ರ ಅದಕ್ಕೆ ಬರೇ ಕಾಲ ಒಂದೇ ಅದಾವು. ಹಿಂಗಾಗಿ ಮನುಷ್ಯಾ ಕಟ್ಟಿದ ಚಕ್ರಾ ನೋಡಕೊಳ್ಳದ ಕಾಲ ಎತ್ತಾಗ ಒಡಾಕ ಹತ್ತಿನೀ, ಯಾಕ ಓಡಾಕ ಹತ್ತೇನಿ, ಅನ್ನೊದು ಗೊತ್ತಿಲ್ಲದ ಓಡೇ ಓಡುತ್ತ ನೋಡು. ಇವತ್ತ ನಮ್ಮೂರ ಅಗಸಿ ಬಾಗಲದಾಗ ಹುಗಿದಿರುವ ಶಿವಲಿಂಗ ಈ ಕಾಲ ಚಕ್ರಾನ್ನ ತಿರಬೈತಿ. . . . " (ಚಾಜ. ಪು.4) ಎಂಬ ಮಾತಲ್ಲಿ ಹನ್ನೆರಡನೆಯ ಶತಮಾನದ ಶರಣ ಸಂಸ್ಕೃತಿಯು ಈ ಪದ್ಧತಿಯನ್ನು ವಿರೋಧಿಸುತ್ತದೆ ಎಂಬುದನ್ನು ಸೂತ್ರಧಾರನ ಮೂಲಕ ಹೇಳಿಸುತ್ತಾರೆ. ಈ ಕ್ರೂರವಾದ ಆಚಾರ ಪರಂಪರೆಯ ಮುಂದುವರಿಕೆಯನ್ನು ವಿರೋಧಿಸಿ ಜನ ಜಾಗ್ರತಿಯನ್ನು ಮೂಡಿಸುವುದರ ಜೊತೆಗೆ ಗಂಡಿನಂತೆ ಹೆಣ್ಣು ಸರಿಸಮಾನಳು ಎಂಬ ಧ್ವನಿ ಇಲ್ಲಿದೆ. ಅಧಿಕಾರದಲ್ಲಿರುವವರು ತಮ್ಮ ಅನುಕೂಲಕ್ಕೆ ಆಚಾರ ಪದ್ಧತಿಗಳನ್ನು ರೂಢಿಸಿಕೊಂಡು ಜನರ ಮೇಲೆ ಅವುಗಳನ್ನು ಬಲವಂತವಾಗಿ ಹೇರಿ, ತಮ್ಮ ಕಾರ್ಯ ಸಾಧಿಸಿಕೊಳ್ಳುವ ಮೃಗೀಯ ಮನಸ್ಥಿತಿಗಳಿಂದ ಹೊರಬರಬೇಕು. ದೇವರ ಹೆಸರಿನಲ್ಲಿ ದಲಿತರನ್ನು ಶೋಷಣೆ ಮಾಡುತ್ತ ಮನಸ್ಸನ್ನು ಬಂಜರು ಭೂಮಿ ಮಾಡಿದ್ದಾರೆ ಎಂಬ ಸಂದೇಶವನ್ನು ಸೂತ್ರಧಾರನ ಮೂಲಕ ನಾಟಕಗಾರ್ತಿಯು ಹೇಳಿಸಿರುವುದು ಸಮಂಜಸವಾಗಿದೆ.

ದೇಸಾಯಿಯ ಹೆಂಡತಿಯರು ರುದ್ರಮ್ಮ ಮತ್ತು ಸಾವಂತ್ರಿ. ಸಂಪ್ರದಾಯದ ಹೆಸರಿನಲ್ಲಿ ಹೆಣ್ಣನ್ನು ಶೋಷಣೆ ಮಾಡುತ್ತಿದ್ದ ದೇಸಾಯಿಯ ವಿರುದ್ಧವೇ ಆತನ ಎರಡನೆಯ ಹೆಂಡತಿ ಸಾವಂತ್ರಿ ಸಿಡಿದೇಳುತ್ತಾಳೆ. ಆಕೆ ಸ್ತ್ರೀಸಂವೇದನೆಯ ಹೆಣ್ಣಾಗಿ ಕಂಡುಬಂದರೆ ರುದ್ರಮ್ಮ ಗಂಡನನ್ನು ಎದುರಿಸಲಾರದ ಹೆಣ್ಣುಗಳ ಪ್ರತೀಕವಾಗಿ ಚಿತ್ರಿತವಾಗಿದ್ದಾಳೆ. ರುದ್ರಮ್ಮ ಅನಕ್ಷರಸ್ಥ ಸ್ತ್ರೀಯರ ಪ್ರತಿಬಿಂಬವಾದರೆ, ಸಾವಂತ್ರಿ

ಅಕ್ಷರಸ್ಥರ ಮಹಿಳೆಯ ಪ್ರತಿಬಿಂಬವಾಗಿದ್ದಾಳೆ. ಸಾವಿಂತ್ರಿ ಗಂಡನನ್ನೇ ವಿರೋಧಿಸುವಂತೆ “ಕಾಲಕ್ಕೆ ತಕ್ಕಂತೆ ಬದಲಾಗಬೇಕು. ಊರು ಗುತಗಿ ಹಿಡಿಯುವ ಕಾಲ ಅಲ್ಲ ಇದು. ಎಲ್ಲಾರಂಗ ನಾವೂ ಊರಾಗ ಇರಬೇಕು. ಅದು ಬಿಟ್ಟು ಊರನಂದು, ನಾ ಊರ ಆಳಾಕ ಹುಟ್ಟೀನಿ ಅಂದ್ರ ಆಗುದಿಲ್ಲ ಈಗ. ದೇಸಾಯಿ ನೆತ್ತಿಗೇರಿದ ಪಿತ್ತಾ ಇಳಿಯಲಿ ಆಗರ ಬುದ್ಧಿ ಬಂದೀತು.” (ಚಾಜ, ಪು.16) ಎಂದು ರುದ್ರಮ್ಮನಿಗೆ ಹೇಳುವ ಮಾತುಗಳು ಪರಂಪರಾಗತವಾಗಿ ಹೆಣ್ಣು ಗಂಡನ ಆದೇಶವನ್ನು ಪಾಲಿಸಬೇಕು ಮತ್ತು ಆತನ ವಿರುದ್ಧ ಮಾತನಾಡಬಾರದೆಂಬ ಸಂಪ್ರದಾಯವನ್ನು ಮುರಿಯುತ್ತಾಳೆ. 'ನಮ್ಮ ಸುಖ ದುಃಖ ನಾವ ಅನುಭವಿಸಬೇಕು. ನಾ ಸಾಲಿ ಕಲಿಯುವ ಮುಂದ ನಮ್ಮೂರಾಗ ಸ್ವಾಮಾರಕ್ಕೊಮ್ಮೆ ಹುಚ್ಚಪ್ಪಜ್ಜನ ಮಠದಾಗ ಭಜನಿ ಮಾಡತಿದ್ರು, ಶರಣ ಶರಣೆಯರ ಬಗ್ಗೆ ಪುರಾಣ ಹೇಳತಿದ್ರು. ಗಂಡಾ ತಪ್ಪಿ ನಡದ್ರ ಹೆಂಡ್ತಿಯಾದಾಕಿ ಸುಮ್ಮಕ ಇರಬಾರದಂತ. ಅವಗ ತಿದ್ದಿ ಬುದ್ದಿ ಹೇಳಬೇಕಂತ. ಇಲ್ಲಾ ಅಂದ್ರ ಅವಾ ಮಾಡು ಪಾಪದಾಗ ಆಕೀನೂ ಸೇರಿದಂಗಂತ' ಎಂದು ಹೇಳುವಲ್ಲಿ ಆಯ್ದಕ್ಕಿ ಲಕ್ಕಮ್ಮ ಶರಣೆಯ ಕತೆಯನ್ನು ನೆನಪಿಕೊಳ್ಳುತ್ತಾಳೆ. ಹೆಂಡತಿಯರಿಗೆ ಸಂಸಾರಸುಖ ನೀಡದ ದೇಸಾಯಿ ಪರಸ್ತ್ರೀಯರ ಮೇಲೆ ತನ್ನ ಪೌರುಷ ತೋರಿಸುತ್ತಾನೆ. ಈ ಪರಿಸ್ಥಿತಿಯನ್ನು ಅನುಭವಿಸಿದ ದೇಸಾಯಿ ಹೆಂಡತಿ ರುದ್ರಮ್ಮ ಸಂಸಾರ ಸುಖದ ಅಸಹನೆಯನ್ನು ತನ್ನಲ್ಲಿ ಬಚ್ಚಿಟ್ಟುಕೊಂಡು ನೋವನ್ನು ಅನುಭವಿಸುತ್ತಾಳೆ. ಅವಿರತವಾಗಿ ಗಂಡನ ವಿರುದ್ಧವೇ ಬಂಡಾಯವೆದ್ದು ಮೌಢ್ಯದಿಂದ ಚಾಜದ ಹೆಸರಿನಲ್ಲಿ ದೇಹವನ್ನು ಅರ್ಪಿಸುತ್ತಿದ್ದ ಅಬಲೆಯರನ್ನು ಕಲ್ಲಿಯ ಸಹಾಯದಿಂದ ಪಾರುಮಾಡುವ ಗಟ್ಟಿಗಿತ್ತಿ ಹೆಣ್ಣಾಗಿ ಸಾವಂತ್ರಿ ಬಿಂಬಿತಳಾಗಿದ್ದಾಳೆ. ಶ್ರೀಮಂತಿಕೆಯ ಗರ್ವದಿಂದ ಮದವೇರಿದ್ದ ದೇಸಾಯಿಯ ಪಾಲಿಗೆ ಸಾವಂತ್ರಿಯೇ ದುರ್ಗಿಯಾಗಿ ಕಂಡುಬರುತ್ತಾಳೆ. ಇಲ್ಲಿನ ಪುರೋಹಿತಶಾಹಿ ವ್ಯವಸ್ಥೆಯಲ್ಲಿ ಗಂಡಸರು ತಮ್ಮ ಹೆಂಡತಿಯರನ್ನು ಹೆದರಿಸಿ ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಳ್ಳುವವರಾಗಿ ಕಂಡು ಬರುತ್ತಾರೆ. ದೇಸಾಯಿ ತನ್ನ ಪೂರ್ವಜರು ಮಾಡಿಕೊಂಡು ಬಂದ ಚಾಜವನ್ನೂ ಉಳಿಸಿಕೊಳ್ಳಬೇಕೆಂಬ ತುಮುಲದಿಂದ ಬಲವಂತವಾಗಿ ಆಚರಣೆಯನ್ನು ಮುಂದುವರೆಸಿಕೊಂಡು ಹೋಗುವ ಪ್ರಯತ್ನ ಮಾಡುತ್ತಾನೆ. ಹಾಗಾಗಿ ಊರಿನಲ್ಲಿ ಮತ್ತೊಂದು ಬಣ ತಯಾರಾಗುತ್ತದೆ.

ದೇಸಾಯಿಗಳ ವಾಡೆಯಲ್ಲಿ ಪರಂಪರಾಗತವಾಗಿ ನಡೆದುಕೊಂಡು ಬರುತ್ತಿದ್ದ ಚಾಜದ ಆಚರಣೆಯ ವಿರುದ್ಧ ಬಂಡೆದ್ದ ವಿರೋಧಿ ಬಣದ ನಾಯಕನಾಗಿದ್ದ ರಮೇಶ ಎಂ.ಎಲ್.ಎ ಆಗಿ ಬಂದನು. ನಂತರ ಈ ಕಾರ್ಯವನ್ನು ವಾಡೆಯಿಂದ ಗೆಸ್ಟ್ ಹೌಸ್‌ನಲ್ಲಿ ಚಾಜ ಮತ್ತು ಮಹಾನವಮಿಯ ಮೇಣದ ಪಲ್ಲಕ್ಕಿಯಲ್ಲಿ ತಾನು ಕುಳಿತುಕೊಳ್ಳುವ ಈ ಪರಂಪರೆಯನ್ನೆ ಮತ್ತೇ ಮುದುವರೆಸುವ ಉದ್ದೇಶಕ್ಕಾಗಿ ಮೇಲ್ಜಾತಿ ಮತ್ತು ಕೆಳಜಾತಿಯ ಪಂಗಡಗಳ ನಡುವೆ ನಡೆಯುವ ಸಂಘರ್ಷವನ್ನು

ಹುಟ್ಟುಹಾಕುತ್ತಾನೆ. ಗುಂಡಾಗಿರಿ ಮೂಲಕ ಅದನ್ನು ಬಲವಂತವಾಗಿ ಪಡೆಯುವುದಕ್ಕಾಗಿ ಹವಣಿಸುತ್ತಾನೆ. ಇಂಥ ಪರಿಸ್ಥಿತಿಯಲ್ಲಿ ಜನರನ್ನು ಎತ್ತಿಗಟ್ಟುವ ಕುತಂತ್ರಬುದ್ಧಿ ಇಂದಿನ ರಾಜಕೀಯ ವ್ಯವಸ್ಥೆಯನ್ನು ಕಣ್ಣಮುಂದೆ ತಂದು ನಿಲ್ಲಿಸಿದಂತಾಗುತ್ತದೆ. ದೇಸಾಯಿ ಮತ್ತು ರಮೇಶನ ವರ್ತನೆಗಳು ಮಾನವೀಯ ಮೌಲ್ಯಗಳನ್ನೇ ಕಳೆದುಕೊಂಡ ವ್ಯಕ್ತಿಗಳ ವಿಕೃತ ರೂಪವನ್ನು ತೋರಿಸುತ್ತದೆ. ರಮೇಶನು ಕೂಡ ದಲಿತ ಹೆಣ್ಣು ಮಗಳನ್ನು ಚಾಜಕ್ಕೆ ಕರೆತರುವಂತೆ ಹೇಳುವುದನ್ನು ನೋಡಿದರೆ ಆತನ ಒಂದು ಮೃಗೀಯ ಮನಸ್ಥಿತಿ ಅರ್ಥವಾಗುತ್ತದೆ. ಬಂಡವಾಳಶಾಹಿ ದಲಿತರಿಂದ ಶೋಷಿತ ದಲಿತರ ಮೇಲಾಗುವ ಪ್ರಹಾರವನ್ನು ಇದು ಬಿಂಬಿಸುತ್ತದೆ. ತನ್ನ ಸ್ವಾರ್ಥಕ್ಕಾಗಿ ತನ್ನ ದಲಿತರನ್ನೆ ಬಲಿಕೊಡುವಷ್ಟು ಕ್ರೌರ್ಯ ಅವನಲ್ಲಿ ಬೆಳೆದು ನಿಂತಿದೆ. ಇಂತಹ ಸನ್ನಿವೇಶಗಳು ಅಪಾಯಕಾರಿ ಎಂಬುದನ್ನು ನಾಟಕಕಾರ್ತಿಯು ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಸಮಾಜದ ಮೇಲೆ ಆಗುವ ಅದರ ಪರಿಣಾಮ, ಇದನ್ನು ಗಮನಿಸಿದ ಬಸವಣ್ಣ, ಸಾವಿತ್ರಿ ಮತ್ತು ಕಲ್ಲಿ ಜನರಿಗೆ 'ದೊಡ್ಡವರ ಪ್ರತಿಷ್ಠೆಗಾಗಿ ನಡೆಯುವ ಜಗಳದಲ್ಲಿ ಸಾಯುವವರು ನಮ್ಮಂತ ಸಣ್ಣವರೇ' ಎಂಬ ಸತ್ಯದ ಅರಿವು ಮೂಡಿಸಿ, ಅವರನ್ನು ಸಹಬಾಳ್ವೆಯಿಂದ ಬಾಳುವಂತೆ ಮಾಡುತ್ತದೆ. ಈ ನಾಟಕದಲ್ಲಿಯ ದಲಿತರ ನಾಯಕ ಬಸವಣ್ಣ ಹನ್ನೆರಡನೆ ಶತಮಾನದ ಬಸವಣ್ಣನಂತೆ ಕಂಡುಬರುತ್ತಾನೆ. ಮಾನವೀಯ ಮೌಲ್ಯಗಳು ಅವನಲ್ಲಿದ್ದು ದೇಸಾಯಿ ಮಾಡುವ ಈ ಕಾರ್ಯಗಳನ್ನು ವಿರೋಧಿಸುತ್ತಾನೆ. ರಮೇಶನು ಮಾಡುವ ಕ್ರೌರ್ಯವನ್ನು ಪ್ರತಿರೋಧಿಸುತ್ತಾನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಸಮಾನರು ಎಂಬುದನ್ನು ಬಸವಣ್ಣನ ಪಾತ್ರ ಸರಿಯಾಗಿ ನಿಭಾಯಿಸುತ್ತದೆ. ಕೊನೆಯಲ್ಲಿ ಆತನು ದೇಸಾಯಿ ಮತ್ತು ರಮೇಶನ ಕಡೆಯವರು ಜಗಳ ಮಾಡುವವರನ್ನು ಉದ್ದೇಶಿಸಿ ಹೇಳುವ ಮಾತುಗಳು ಹೀಗಿವೆ.“ಹೌದು ದೇಸಾಯಿನಿ ಹೇಳಿದ್ದು ಖರೆ ಐತಿ. ಈ ಹೊಡದಾಟದಾಗ ನೀವು ಸಾಯಿತೀರಿ. ನಿಮ್ಮ ಮಕ್ಕಳು ಪರದೇಶಿ ಆಕಾರ. ನಿಮ್ಮ ಹೆಂಡ್ರು ರಂಡಿ ಮುಂಡೇರಾಗಿ ದೇಸಾಯಿಯಂತವರಿಗೆ, ರಮೇಶನಂತವ್ರಿಗೆ ಬಲಿಯಾಕ್ಕರ. ಕೋರ್ಟು ಕಚೇರಿ ಅಂತ ಇದ್ದಬಿದ್ದ ಹೋಲಾಮನಿ ಮಾರಕೊಂಡ ಹೊಟ್ಟಿ ತುಂಬಿಸಿಕೊಳ್ಳಾಕ ಗುಳೆ ಹೊಕ್ಕಿರಿ. ನಿಮ್ಮ ನಂಬಿದ ತಂದೆತಾಯಿಗಳಿಗೆ ಏನ ಹೇಳತೀರಿ.” (ಅದೇ ಪು.91) ಎನ್ನುತ್ತಾ, 'ದೇವರನ್ನು ಸೃಷ್ಟಿಸಿದವರು ನಾವು, ದೇವರೇ ಇಲ್ಲ, ಈ ಪದ್ಧತಿಗಳು ಮಾನವನ ಸೃಷ್ಟಿ, ದೇವರ ಮಕ್ಕಳ ನಾವು ಹಸಿವಿನಿಂದ ಬಳಲೋದು ಯಾಕೆ ? ಪುರೋಹಿತರು, ಪೂಜಾರಿಗಳು ತಮ್ಮ ಸ್ವಾರ್ಥಕ್ಕೆ ಹುಟ್ಟಿ ಹಾಕಿದ ಪದ್ಧತಿಗಳಿಗೆ ನಾವು ಬಲಿಯಾಗುತ್ತಿದ್ದೇವೆ. ನಮ್ಮ ಕರ್‌ಯಾನ ದುರಗವ್ವ, ಊರಹೊರಗಿನ ಹನುಮಪ್ಪ ಏನು ಪಾಪ ಮಾಡಿದಾರ, ಅವರ ಗುಡಿಗಳ್ಯಾಕ ಹಾಳಾಗೊಡವಿ ಆಗ್ಯಾವ, ಹಾರೂರ ದೇವರ ಮ್ಯಾಲ ಬಂಗಾರ ಬೆಳ್ಳಿ ಹೇರಿಕೊಂಡಾವ, ಸುಳ್ಳನ್ನು ಚನ್ನಾಗಿ ಹೇಳ್ತಬಂದೋರು ಮ್ಯಾಲಕ್ಕ ಹೋದ್ರು, ಯಾರ ಅವರ ಮಾತ ನಂಬಿಕೊಂಡು ಬಂದ್ರೆಲ್ಲಾ ಅವರೆಲ್ಲಾ

ನೆಲದಾನ ಹುಳುಹುಪ್ಪಡಿ ಆದ್ವಿ' ಎಂಬಲ್ಲಿ ಮೇಲ್ವರ್ಗದವರಿಂದ ಹುಟ್ಟಿಕೊಂಡ ಪುರಾಣಗಳನ್ನು ನಂಬಿ ದೇವರ ಹೆಸರ ಹೇಳಿಕೊಂಡು ಮಾರುಹೋದ ನಾವೂ ಧರ್ಮದ ಹೆಸರಿನಲ್ಲಿ ಸ್ವಂತ ವಿಚಾರ ಮಾಡುವುದನ್ನೇ ಕಳೆದುಕೊಂಡಅಂತಹ ನೋವು ಎದ್ದು ಕಾಣುತ್ತದೆ. ಹಾಗಾಗಿ ಇದೆಲ್ಲದನ್ನು ಮೆಟ್ಟಿನಿಲ್ಲಲು ವಿರೋಧಿಸಲು ನಮ್ಮಲ್ಲಿ ವೈಚಾರಿಕ ಪ್ರಜ್ಞೆಯ ಅವಶ್ಯಕತೆಯನ್ನು ಡಾ. ಮಲ್ಲಿಕಾ ಘಂಟಿಯವರು ಸಾಮಾಜಿಕ ಕಳಕಳಿಯ ಹಿನ್ನೆಲೆಯಲ್ಲಿ ಹೇಳುತ್ತಾರೆ. ಜಗಳ ಹಚ್ಚಿದವರು ಬೆಚ್ಚನೆಯ ಮನೆಯಲ್ಲಿ ಮಜಾ ಮಾಡುತ್ತ ಕುಳಿತಿರುತ್ತಾರೆ. ಇಬ್ಬರು ನಾಯಕರ ಮೇಲಿನ ಅತಿಯಾದ ಅಭಿಮಾನದಲ್ಲಿ ಬಲಿಯಾಗುವುದು ದಲಿತರು ಮತ್ತು ಬಡವರು. ಜನ ಎಚ್ಚೆತ್ತುಕೊಳ್ಳುವದರೊಂದಿಗೆ ಅಕ್ಷರ ಜ್ಞಾನದ ಜೊತೆಯಲ್ಲಿ ವೈಚಾರಿಕ ಚಿಂತನೆಯೂ ಬೇಕಾಗುತ್ತದೆ. ದೇಸಾಯಿ ಮತ್ತು ರಮೇಶನಂತವರಿಗೆ ಜನರು ಬುದ್ಧಿಯನ್ನು ಕಲಿಸುತ್ತಾರೆ. ಅಧಿಕಾರದಿಂದ ಮೆರೆದವರು ಓಡಿಹೋಗಿ ಸೋಲನ್ನು ಒಪ್ಪಿಕೊಳ್ಳುತ್ತಾರೆ. ಇದು ಪ್ರಜಾಪ್ರಭುತ್ವ. ಇಲ್ಲಿ ಜನ ಗೆಲ್ಲಬೇಕು ಜನರ ಗೆಲುವಿನಲ್ಲಿ ದೇಶದ ಭವಿಷ್ಯ ಇದೆ. ಗುಲಾಮಿತನವನ್ನು ತೊಳೆದು ಹಾಕಬೇಕು ಎಂದು ಬಸವಣ್ಣ ಹೇಳಿದ ಮಾತು ಅಕ್ಷರಶಃ ಸತ್ಯವಾದದ್ದು. ನಿಮ್ಮ ಬಡತನ, ಅಜ್ಞಾನ, ಅನಕ್ಷರತೆ, ಶತಶತಮಾನಗಳಿಂದ ಬಂದಅಂತಹ ಮೂಢನಂಬಿಕೆ ದುಶ್ಚಟಗಳನ್ನು ಬಿಟ್ಟರೆ ನೀವು ಕೂಡ ಸಮಾಜದಲ್ಲಿ ಗೆಲುವನ್ನು ಕಾಣುತ್ತೀರಿ ಅನ್ನುವ ಮಾತು ನಿಜವಾಗಿದೆ. ದಲಿತ ಜನರು ಸೇಡು ತೀರಿಸಿಕೊಳ್ಳಬೇಕಾಗಿರುವುದು ಜಾತಿವ್ಯವಸ್ಥೆಯ ವಿರುದ್ಧ ಮತ್ತು 'ಚಾಜ'ದ ಹೆಸರಿನಲ್ಲಿ ನಡೆಯುವ ದಬ್ಬಾಳಿಕೆ ವಿರುದ್ಧ. ಎಲ್ಲ ವರ್ಗದ ಜನರು ಈ ವ್ಯವಸ್ಥೆಯ ವಿರುದ್ಧ ಸಂಘಟಿತ ಹೋರಾಟ ಮಾಡಬೇಕೆಂಬ ಭವಿಷ್ಯತ್ತಿನ ಆಶಯದ ಮೂಲಕ ನಾಟಕ ಮುಗಿಯುತ್ತದೆ. ಒಟ್ಟಿನಲ್ಲಿ ನಾಟಕ ಅಧಿಕಾರಸ್ಥರಿಂದ ಅಧಿಕಾರ ಹೀನರ ಮೇಲೆ ನಡೆಯುವ ದಬ್ಬಾಳಿಕೆಯನ್ನು ಎತ್ತಿತೋರುತ್ತದೆ. ಮಹಿಳಾ ನಾಟಕಕಾರರ ನಾಟಕಗಳು ಕಡಿಮೆ ಇದ್ದರೂ ಕೂಡ ಸಮಾಜದಲ್ಲಿ ನಡೆಯುವ ಅಂಧಕಾರ, ಶೋಷಣೆ, ಮಹಿಳೆಯರ ಮೇಲಾಗುವ ದೌರ್ಜನ್ಯವನ್ನು ಎತ್ತಿ ತೋರಿಸುವ ಕಾರ್ಯವನ್ನು ಮಾಡಿವೆ.

## ಪರಾಮರ್ಶನ ಗ್ರಂಥಗಳು:


1. ಅಶೋಕ ಟಿ.ಪಿ. (ಸಂ), (2011), ಕೆ.ವಿ.ಸುಬ್ಬಣ್ಣ ಅವರ ಆಯ್ದ ಲೇಖನಗಳು, ಅಕ್ಷರ ಪ್ರಕಾಶನ, ಹೆಗ್ಗೋಡು.
2. ರಂಗನಾಥ ಎಚ್.ಕೆ., (2014), ಕರ್ನಾಟಕ ರಂಗಭೂಮಿ, ಹೇಮಂತ ಸಾಹಿತ್ಯ, ಬೆಂಗಳೂರು.
3. ಸುಮಿತ್ರಾಬಾಯಿ ಬಿ.ಎನ್., (2018) ಸ್ತ್ರೀವಾದ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
4. ಮಲ್ಲಿಕಾ ಘಂಟಿ, (2005), ಚಾಜ, ಗೌತಮ ಪ್ರಕಾಶನ, ಬಳ್ಳಾರಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.